**Code No. 08 X(D)**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ನಗುವುದು ದೇವರು ಮಾನವನಿಗೆ ನೀಡಿರುವ ಅದ್ಭುತವಾದ ವರವಾಗಿದೆ. ಪ್ರಾಣಿಗಳಿಗೂ ನಮ್ಮಂತೆ ಕಾರ್ಯ ಕೌಶಲ್ಯಗಳಿದ್ದರೂ ಜೀವಕೋಶ ಸಂರಚನೆ ಇದ್ದರೂ ಅವು ನಗಲಾರವು. ಹೃದಯದ ಭಾರವನ್ನು ಕಡಿಮೆಯನ್ನು ಮಾಡಿಕೊಳ್ಳಲಾರವು. ಆದರೆ ಮನುಷ್ಯನಿಗೆ ಹಾಗಲ್ಲ ದುಃಖ ದುಮ್ಮಾನಗಳು ಎಷ್ಟೇ ಇರಲಿ ಕಷ್ಟಗಳೇ ಇರಲಿ ಸಾಂದರ್ಭಿಕವಾಗಿ ಮನಸ್ಫೂರ್ತಿ ಆಗಿ ನಕ್ಕು ತನ್ನೆಲ್ಲ ಹೃದಯದ ಭಾರವನ್ನು ಇಳಿಸಿಕೊಳ್ಳುವನು. ವೈದ್ಯಕೀಯ ವಿಜ್ಞಾನದ ಪ್ರಕಾರ ನಗು ಎಂಬುದು ಒಂದು ದಿವ್ಯ ಔಷದವಾಗಿದೆ. ಯಾವುದೇ ಕಾಯಿಲೆಗಳು ಇರಲಿ ಎಂತಹುದೆ ದೊಡ್ಡ ವ್ಯಾಧಿಯೇ ಇರಲಿ ನೀವು ನಗು ನಗುತ್ತಾ ಔಷಧಿಯನ್ನು ನಿಯಮಿತವಾಗಿ ಸೇವಿಸಿದರೆ ಆಶ್ಚರ್ಯಕರವಾದ ರೀತಿಯಲ್ಲಿ ಪರಿಣಾಮಗಳು ಉಂಟಾಗಿ ದೇಹವು ಸ್ವಸ್ಥವಾಗುತ್ತದೆ ಎನ್ನುತ್ತಾರೆ ವೈದ್ಯರು. ಮನಸ್ಫೂರ್ತಿ ಆಗಿ ನಕ್ಕಾಗ ಎಂಡಾರ್ಫಿನ್ ಎಂಬ ರಸದೂತ ಬಿಡುಗಡೆ ಆಗಿ ಮೆದುಳನ್ನು ತಲುಪುತ್ತದೆ. ಒಡನೆಯೇ ಮೆದುಲು ಚೇತೋಹಾರಿ ಆಗಿಬಿಡುತ್ತದೆ.

ಒಮ್ಮೆ ಮನಸ್ಫೂರ್ತಿ ಆಗಿ ನಕ್ಕರೆ ದೇಹದ ನರನಾಡಿಗಳೆಲ್ಲ ಪ್ರಚೋದನೆಗೊಳ್ಳುತ್ತದೆ. ಎಲಾ ಭಾಗಗಳಿಗೂ ರಕ್ತ ಸಂಚಾರ ಅಧಿಕಾವಾಗಿ ಆಗುತ್ತದೆ ಎನ್ನುತ್ತದೆ ವಿಜ್ಞಾನ. ಆಗ ಜಡ್ಡುಗಟ್ಟಿದ ಅಂಗಾಂಗ ಎಲ್ಲವೂ ಚುರುಕಾಗಿ ಚಟುವಟಿಕೆಯ ತಾಣವಗುತ್ತದೆ. ನಿರ್ಮಲವಾದ ಮನಸ್ಸಿನ ಮುಕ್ತವಾದ ನಗು ನಕಾರತ್ಮಕ ಧೋರಣೆಯನ್ನು ಸಕಾರಾತ್ಮಕ ಆಗಿ ಬದಲಿಸುತ್ತದೆ. ಆ ಕ್ಷಣದ ಮಟ್ಟಿಗೆ ಪೂರ್ವಗ್ರಹ, ದ್ವೇಷ, ಅಸೂಯೆ, ಭಾವಗಳು ಕಣ್ಮರೆಯಾಗಿ ಅಲ್ಲಿ ನಿರಾಳತೆಯು ಕಾಣಸಿಗುತ್ತದೆ. ಮನಸ್ಸು ನಿರಾಳಗೊಂಡ ತಕ್ಷಣವೇ ದೈಹಿಕ ಬಿಗಿತ ಇಲ್ಲವಾಗಿ ನರ

[ Turn over

ನಾಡಿಗಳು ಮುಕ್ತ ಸ್ವಾತಂತ್ರವಾದ ಅನುಭವದಲ್ಲಿ ತೊಡಗುತ್ತದೆ. ಭಾವನೆಗಳ ವೈಪರೀತ್ಯದಿಂದ ಬಿಗಿ ಆಗಿದ್ದ ನರವ್ಯೂಹವು ಹಗುರವಾದ ಪರಿಣಾಮವೇ ನಮಗೆ ದೊಡ್ಡ ನಮ್ಮದಿಯಾಗಿದೆ. ಅಂದ ಹಾಗೆ ನಗುವುಗಳಲ್ಲಿ ಹಲವು ವೈವಿಧ್ಯಗಳಿದ್ದು, ಎಲ್ಲಾ ರೀತಿಯ ನಗುವಿಗೂ ಈ ರೀತಿಯಾದ ಪರಿಣಾಮ ಉಂಟಾಗುವುದಿಲ್ಲ.

ಕುಹಕವಾದ ನಗು ಈ ರೀತಿಯ ನಗು ಬೇರೊಬ್ಬರ ಬಗೆಗಿನ ಅಣಕವನ್ನು ಆಡಗಿರುತ್ತದೆ. ಇತರರು ಕಷ್ಟಕ್ಕೆ ಸಿಲುಕಿದಾಗ, ನೋವಿಗೆ ಈಡಾದಾಗ, ಅಲ್ಲದೆ ತಮ್ಮ ವೈರಿಗಳು ಎಂದಾಗಲೀ, ಪ್ರತಿಸ್ಪರ್ಧಿ ಎಂದಾಗಲೀ, ಅವರು ತೊಂದರೆಗೆ ಸಿಲುಕಿದಾಗ ಅದನ್ನು ಕಂಡು ಸಂತೋಷವನ್ನು ಪಡುತ್ತಾರೆ. ಕೆಲವರು ನೀಡುವ ಪ್ರತಿಕ್ರಿಯೆ ಒಂದು ಭಾಗವೇ ಕುಹಕ ನಗುವಾಗಿದೆ. ವ್ಯಂಗ್ಯವಾದ ನಗುವು ಇನ್ನೊಬ್ಬರನ್ನು ದೂಷಿಸಿ, ಟೀಕಿಸಿ, ನೇರವಾಗಿ ಕೆಲವು ಪದಗಳು ಬಳಸದೇ ಅವರ ಮನ ನೋಯಿಸಬೇಕೆಂದಾಗ ಈ ರೀತಿಯ ನಗುವನ್ನು ಕಾಣುತ್ತೇವೆ. ಎದುರಾಳಿಗಳ ಪರಿಸ್ಥಿತಿ ಕಂಡು ಸುಳ್ಳು ಸುಳ್ಳೆ ಮರುಕ ಪಡುವವರ ರೀತಿಯಲ್ಲಿ ಅನುಕಂಪ ತೋರಿಸುವ ಪರಿಯನ್ನು ವ್ಯಕ್ತಪಡಿಸುವ ಕ್ರಿಯೆಯ ಭಾಗವೇ ವ್ಯಂಗ್ಯ ನಗುವಾಗಿದೆ. ವ್ಯಂಗ್ಯ ನಗುವಿನ ಹಿಂದೆ ದ್ವೇಷದ ಮನೆಯನ್ನು ಮಾಡಿರುತ್ತದೆ.

ಅಟ್ಟಹಾಸದ ನಗು ಅಹಂಕಾರದ ಸಂಕೇತವಾಗಿದೆ. ನಾನೇ ಶ್ರೇಷ್ಠನು ನನ್ನ ಸಮಾನ ಯಾರೂ ಇಲ್ಲ, ನಾನು ಹೇಳಿದ್ದೇ ಸರಿ. ನನ್ನ ಎದುರು ಯಾರೂ ಉಳಿಯಲ್ಲ ಎಂಬ ಭಾವ ವ್ಯಕ್ತಿಯಲ್ಲಿ ನಗುವ ನಗುವೇ ಅಟ್ಟಹಾಸದ ನಗುವಾಗಿದೆ. ನಮ್ಮ ಸುತಲೇ ಸುತ್ತುವ ನಗುವಿನ ಕ್ರಿಯೆ ವ್ಯಕ್ತಿಯ ಅಂತ್ಯದವರೆಗೆ ಕರೆದುಕೊಂಡು ಹೋಗುತ್ತದೆ. ಅತ್ಯುನ್ನತ ಪತನ ಹೇಗೆ ಎಂಬ ಮಾತಿನಂತೆ ಅತಿಯಾಗಿದ್ದು ಗತಿ ಕಾಣಲೇ ಬೇಕು ಎಂಬ ನೀತಿಯಂತೆ ಅವರು ಅಟ್ಟಹಾಸದ ನಗುವಿನಿಂದ ನಕ್ಕರೆ ಆತನಿಗೆ ಅಂತ್ಯ ಕಾಲ ಹತ್ತಿರವಿದೆ ಎಂದು ಅರ್ಥವಾಗುತ್ತದೆ. ನಮ್ಮ ತಪ್ಪನ್ನು ಒಪ್ಪಿಕೊಂಡು ತಿದ್ದಿಕೊಳ್ಳಲು ತಮ್ಮನ್ನೇ ತಾವೇ ಗೇಲಿಯನ್ನು ಮಾಡಿಕೊಂಡು ನಗುವವರು ಇದ್ದಾರೆ. ಶುದ್ಧ ಹಾಸ್ಯವನ್ನು ಅಸ್ವಾದಿಸಿ ಆನಂದಿಸುವವರು ಇದ್ದಾರೆ. ಯಾವ ಮನಸ್ಸಿಗೂ ನೋವಾಗದಂತೆ ಎಲ್ಲರನ್ನೂ ಒಗ್ಗೂಡಿಸಿ ನಗುವಿನ ಆಸ್ವಾದನೆಯಲ್ಲಿ ತೊಡಗುವವರ ನಗು ನಿಷ್ಕಲ್ಮಷವಾದ ನಗುವಾಗಿದೆ.